2018 ಕ.ತೀ.ವ 1567

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

## ಶ್ರೀ ತೀತಿರ ಎನ್. ಅಪ್ಪಚು @ ತಿತಿರ ಎನ್ ಅಪ್ಪಚು –ವಿರುದ್ಧ– (ಕರ್ನಾಟಕ ರಾಜ್ಯ, ಕರ್ನಾಟಕ ಲೋಕಾಯುಕ್ತ ಪೊಲೀಸ್‌ರವರಿಂದ ಪ್ರತಿನಿಧಿತ)*

ದಂಡ ಪ್ರಕ್ರಿಯಾ ಸಂಹಿತೆ ಯ 401ನೇ ಪ್ರಕರಣದೊಂದಿಗೆ ಓದಲಾದ 397ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಪುನರೀಕ್ಷಣಾ ಅರ್ಜಿ.

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಮೇರೆಗೆ ರಚಿಸಲಾದ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶ ಮತ್ತು ವಿಶೇಷ ನ್ಯಾಯಾಲಯ, LXXVII ರ ಕಡತದ ವಿಶೇಷ ಸಿ.ಸಂ.266/2016ರಲ್ಲಿ ಆಪಾದಿತನು, ದಂಡ ಪ್ರಕ್ರಿಯಾ ಸಂಹಿತೆಯ 401ನೇ ಪ್ರಕರಣದೊಂದಿಗೆ ಓದಲಾದ 397ನೇ ಪ್ರಕರಣದ ಮೇರೆಗೆ ಈ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಸದರಿ ವ್ಯವಹರಣೆಯಲ್ಲಿ, ಅವನು ತನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದೊಂದಿಗೆ ಓದಲಾದ 227ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದಾನೆ. ವಿಶೇಷ ನ್ಯಾಯಾಲಯವು, ದಿನಾಂಕ 04.06.2018ರ ಆದೇಶದ ಮೂಲಕ ಸದರಿ ಅರ್ಜಿಯನ್ನು ವಜಾಗೊಳಿಸಿದೆ. ಆದುದರಿಂದ ಈ ಪುನರ್ ಪರಿಶೀಲನಾ ಅರ್ಜಿ.

ವಿಶೇಷ ನ್ಯಾಯಾಲಯವು, ತನಿಖಾಧಿಕಾರಿಯು ಸಂಗ್ರಹಿಸಿದ ಸಾಕ್ಷ್ಯಾಧಾರಗಳು ಆಪಾದಿತನ ವಿರುದ್ಧ ಆರೋಪಗಳನ್ನು ಮಾಡಿರುವುದಕ್ಕೆ ಸಂಬಂಧಿಸಿದಂತೆ ಮೊದಲ ನೋಟದ ಸಂದರ್ಭದಲ್ಲೆ ಇರುವುದನ್ನು ಕಾಣಬಹುದೆಂದು ಅಭಿಪ್ರಾಯಪಟ್ಟಿದೆ. ಮಂಜೂರಾತಿಯ ಸಂಬಂಧದಲ್ಲಿ, ಆಪಾದಿತನು, ಕರ್ನಾಟಕ ಸರ್ಕಾರದ ಕ್ಲಾಸ್–I ಅಧಿಕಾರಿಯಾಗಿದ್ದು, ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರಿ ಸರ್ಕಾರವಾಗಿದೆಯೆಂದು

*ಕ್ರಿಮಿನಲ್ ರಿವಿಜನ್ ಅರ್ಜಿ ಸಂಖ್ಯೆ: 654/2018, ದಿನಾಂಕ: 26ನೇ ಜುಲೈ, 2018.

ಅಭಿಪ್ರಾಯಪಟ್ಟಿದೆ. ಆದೇಶವು, ವಿವೇಚನೆಯನ್ನು ಉಪಯೋಗಿಸಿರುವುದನ್ನು ತೋರಿಸುವುದರಿಂದ, ಮಂಜೂರಾತಿ ಆದೇಶದಲ್ಲಿ, ಯಾವುದೇ ದುರ್ಬಲತೆಗಳಿಲ್ಲ.

ಇದು ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಪಡುವುದರಿಂದ 19(1)(ಬಿ) ಪ್ರಕರಣವು ತುಂಬಾ ಪ್ರಮುಖವಾದುದಾಗಿದೆ. (ಸಿ)ಖಂಡವು, ಇತರ ಪ್ರವರ್ಗದ ಲೋಕ ನೌಕರರಿಗೆ ಸಂಬಂಧಪಡುತ್ತದೆ. ಈಗ 19(1) (ಬಿ) ಪ್ರಕರಣವನ್ನು ನೋಡುವುದಾದರೆ, ಇದು ನಿರ್ದಿಷ್ಟವಾಗಿ, ರಾಜ್ಯ ಸರ್ಕಾರವು ನಿಯೋಜಿಸಿರುವ ಲೋಕ ನೌಕರರ ಪ್ರಕರಣದಲ್ಲಿ, ಅದರ ವ್ಯವಹಾರಕ್ಕೆ ಸಂಬಂಧಪಡುವ ಸರ್ಕಾರವು ರೂಪಿಸಿದ ನಿಯಮಗಳಷ್ಟರಮಟ್ಟಿಗೆ, ಇದನ್ನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19ನೇ ಪ್ರಕರಣದ ನಿಜವಾದ ವ್ಯಾಪ್ತಿಯನ್ನು ತಗ್ಗಿಸಿರುವುದಕ್ಕೆ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19ನೇ ಪ್ರಕರಣದ ಸಾಲುಗಳಲ್ಲಿ ಓದಲಾಗುವುದಿಲ್ಲ. ಮಂಜೂರು ಮಾಡಲು ಪ್ರಾಧಿಕಾರದ ಸಕ್ಷಮತೆಯನ್ನು ಪರಿಶೀಲಿಸುವಾಗ, ನಿರ್ದಿಷ್ಟವಾಗಿ ಸರ್ಕಾರಿ ನೌಕರನ ಪ್ರಕರಣದಲ್ಲಿ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19(1) (ಬಿ) ಪ್ರಕರಣಕ್ಕೆ ಮಂಜೂರಾತಿಯು ಅನುರೂಪವಾಗಿದ್ದರೆ ಅದಷ್ಟು ಸಾಕಾಗುತ್ತದೆ. ಅಷ್ಟೇ ಅಲ್ಲದೆ, ಸರ್ಕಾರದ ವ್ಯವಹಾರ ನಿಯಮಗಳ ಹಿನ್ನೆಲೆಯಲ್ಲಿ ಪರಿಶೀಲನೆಯು ಅಗತ್ಯವಾಗಿರುವುದಿಲ್ಲ. ವ್ಯವಹಾರಗಳಿಗನುಸಾರವಾಗಿ ಸಂಬಂಧಪಟ್ಟ ಇಲಾಖಾ ಸಚಿವರು ಮಂಜೂರಾತಿಯನ್ನು ಮಾಡಬೇಕೆ ಅಥವಾ ಸರ್ಕಾರದ ಸಚಿವ ಸಂಪುಟ ಮಂಜೂರಾತಿ ಮಾಡಬೇಕೆ ಎಂಬುದನ್ನು ನಿರ್ಧರಿಸುವುದು ಸರ್ಕಾರದೊಳಗಿನ ಆಂತರಿಕ ಏರ್ಪಾಡಾಗಿದ್ದು, ಪ್ರಾಸಿಕ್ಯೂಷನ್ ಏಜೆನ್ಸಿಯು ಇದರಲ್ಲಿ ಏನೂ ಮಾಡಲಾಗುವುದಿಲ್ಲ. ವ್ಯವಹಾರ ನಿಯಮಗಳಡಿಯಲ್ಲಿ ನಿಯಮಿಸಲಾದ ಪ್ರಕ್ರಿಯೆಯು ಸರ್ಕಾರೀ ಕಾರ್ಯ ವ್ಯವಸ್ಥೆಯೊಂದಿಗೆ ಅನುಸಾರವಾಗಿರದಿದ್ದರೆ, ಇದಕ್ಕೆ ಕ್ರಮದೋಷ ಕಾರಣವೇ ಹೊರತು ಪ್ರಾಸಿಕ್ಯೂಷನ್ ಏಜೆನ್ಸಿ ಹೊಣೆಯಾಗಿರುವುದಿಲ್ಲ. ಆದುದರಿಂದ, ಮಂಜೂರಾತಿ ಆದೇಶವು ವ್ಯವಹಾರ ನಿಯಮಗಳಿಗೆ ಅನುವರ್ತಿಯಾಗಿರದಿದ್ದರೆ, ಆಪಾದಿತನು ಅದರ ಅನುಕೂಲವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. *ಕೆ. ಚಂದ್ರಶೇಖರರೆಡ್ಡಿ ಪ್ರಕರಣದಲ್ಲಿ*, ಅಲ್ಲಿ ತಿಳಿಸಲಾದ ಸಂಗತಿಗಳಿಂದ ಬೇಧಿಸಬಹುದಾದಂತೆ, ಮಂಜೂರಾತಿ ನೀಡಿರುವರೆಂದು ಕಂಡು ಬರುವ ಡೆಸ್ಕ್ ಅಧಿಕಾರಿಯು ಅಧಿಕಾರ ಹೊಂದಿರುವುದಿಲ್ಲ. ಆದುದರಿಂದ, ಅಂಥ ಮಂಜೂರಾತಿ ಆದೇಶವು, ಊರ್ಜಿತವಾಗದ್ದು ಎಂದು ಅಭಿಪ್ರಾಯಪಡಲಾಗಿದ್ದು, ಈ ನಿರ್ಣಯುವು ಅರ್ಜಿದಾರನಿಗೆ

ಸಹಾಯಕಾರಿಯಾಗುವುದಿಲ್ಲ. ಲೋಕಾಯುಕ್ತ ಪರ ವಾದಿಸಿರುವ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಉದ್ಧರಿಸಲಾದ *ಡಾ॥ ಎಚ್.ಸಿ. ಸತ್ಯಮ್ ಪ್ರಕರಣದಲ್ಲಿನ* ಈ ನ್ಯಾಯಾಲಯದ ಮತ್ತೊಂದು ನಿರ್ಣಯವನ್ನು ಮಂಜೂರಾತಿಯನ್ನು ಪಡೆದುಕೊಳ್ಳುವ ಅಗತ್ಯದ ಬಗ್ಗೆ ಹೆಚ್ಚಾಗಿ ಚರ್ಚಿಸಲಾಗಿದ್ದು, ಇದನ್ನು ಇಲ್ಲಿಗೆ ಅನ್ವಯಿಸಲಾಗುವುದಿಲ್ಲ. ಆದರೆ ಮೇಲೆ ನಾನು ಚರ್ಚಿಸಲಾದಂತೆ, ಈ ಪ್ರಕರಣದಲ್ಲಿ ನೀಡಲಾದ ಮಂಜೂರಾತಿಯು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 19(1) (ಬಿ) ಪ್ರಕರಣದ ಅಗತ್ಯತೆಯನ್ನು ಮನಗಾಣಿಸಿರುವುದರಿಂದ ಇದು ದೋಷಯುಕ್ತವಾದುದಾಗಿದೆ.

ನಮ್ಮ ಮುಂದಿರುವ ಪ್ರಕರಣದಲ್ಲಿ, ಸ್ಪಷ್ಟವಾಗಿ, ನ್ಯಾಯದ ವಿಫಲತೆಯ ಸೂಚಕವೇನೂ ಇಲ್ಲ. ಏನಾದರೂ ಇದ್ದರೂ ಕೂಡ ಅದನ್ನು ಅರ್ಜಿಯಲ್ಲಿ ತಿಳಿಸಿಲ್ಲ. ಅರ್ಜಿದಾರನು ಅಧಿವಿಚಾರಣೆಯ ಅವಧಿಯಲ್ಲಿ ಆ ವಿವಾದವನ್ನು ಎತ್ತಬಹುದಾಗಿತ್ತು. ಈಗ, ಪ್ರಶ್ನಿತ ಆದೇಶವನ್ನು ತಳ್ಳಿಹಾಕಲು ಯಾವುದೇ ಕಾರಣಗಳಿರುವುದಿಲ್ಲ. ಪುನರ್ ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

*1. ಕ್ರಿಮಿನಲ್ ಅಪೀಲು ಸಂಖ್ಯೆ:2573/2013*
*ಆರ್. ಚಂದ್ರಶೇಖರ್ ರೆಡ್ಡಿ –ವಿರುದ್ಧ–*
*ಕರ್ನಾಟಕ ರಾಜ್ಯ (ಉಲ್ಲೇ) 4*
*2. ಕಿಮಿನಲ್ ಅರ್ಜಿ ಸಂಖ್ಯೆ: 899/2017*
*ಡಾ॥ ಎಚ್.ಸಿ. ಸತ್ಯಮ್ –ವಿರುದ್ಧ– ಕರ್ನಾಟಕ ರಾಜ್ಯ (ಉಲ್ಲೇ) 5*
*3. ಎಐಆರ್ 2004 ಎಸ್‌ಸಿ 5117*
*ರಾಜ್ಯ ಪೊಲೀಸ್ ನಿರೀಕ್ಷಕರ ಮೂಲಕ ರಾಜ್ಯ*
*–ವಿರುದ್ಧ– ಟಿ. ವೆಂಕಟೇಶ್ ಮೂರ್ತಿ (ಉಲ್ಲೇ) 5*

ಅರ್ಜಿದಾರರ ಪರ: ಶ್ರೀ ವೆಂಕಟೇಶ್ ಸಿ. ಶರ್ಮ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ವೆಂಕಟೇಶ್ ಎಸ್. ಅರಬತ್ತಿ, ವಿಶೇಷ ಸರ್ಕಾರಿ ಅಭಿಯೋಜಕರು.

**ಆದೇಶ**

**ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್:**

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಮೇರೆಗೆ ರಚಿಸಲಾದ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶ ಮತ್ತು ವಿಶೇಷ ನ್ಯಾಯಾಲಯ, LXXVIIರ ಕಡತದ ವಿಶೇಷ ಸಿ.ಸಂ.266/2016ರಲ್ಲಿ ಆಪಾದಿತನು, ದಂಡ ಪ್ರಕ್ರಿಯಾ ಸಂಹಿತೆಯ 401ನೇ ಪ್ರಕರಣದೊಂದಿಗೆ ಓದಲಾದ 397ನೇ ಪ್ರಕರಣದ ಮೇರೆಗೆ ಈ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಸದರಿ ವ್ಯವಹರಣೆಯಲ್ಲಿ, ಅವನು ತನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದೊಂದಿಗೆ ಓದಲಾದ 227ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದಾನೆ. ವಿಶೇಷ ನ್ಯಾಯಾಲಯವು, ದಿನಾಂಕ 04.06.2018ರ ಆದೇಶದ ಮೂಲಕ ಸದರಿ ಅರ್ಜಿಯನ್ನು ವಜಾಗೊಳಿಸಿದೆ. ಆದುದರಿಂದ ಈ ಪುನರ್ ಪರಿಶೀಲನಾ ಅರ್ಜಿ.

2. ನಾನು ಅರ್ಜಿದಾರರ ಪರ ವಕೀಲರು ಮತ್ತು ಲೋಕಾಯುಕ್ತದ ಪರವಾದ ವಿಶೇಷ ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿರುತ್ತೇನೆ.

3. ವಿಶೇಷ ನ್ಯಾಯಾಲಯವು, ತನಿಖಾಧಿಕಾರಿಯು ಸಂಗ್ರಹಿಸಿದ ಸಾಕ್ಷ್ಯಾಧಾರಗಳು ಆಪಾದಿತನ ವಿರುದ್ಧ ಆರೋಪಗಳನ್ನು ಮಾಡಿರುವುದಕ್ಕೆ ಸಂಬಂಧಿಸಿದಂತೆ ಮೊದಲ

ನೋಟದ ಸಂದರ್ಭದಲ್ಲೆ ಇರುವುದನ್ನು ಕಾಣಬಹುದೆಂದು ಅಭಿಪ್ರಾಯಪಟ್ಟಿದೆ. ಮಂಜೂರಾತಿಯ ಸಂಬಂಧದಲ್ಲಿ, ಆಪಾದಿತನು, ಕರ್ನಾಟಕ ಸರ್ಕಾರದ ಕ್ಲಾಸ್–I ಅಧಿಕಾರಿಯಾಗಿದ್ದು, ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರಿ ಸರ್ಕಾರವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಆದೇಶವು, ವಿವೇಚನೆಯನ್ನು ಉಪಯೋಗಿಸಿರುವುದನ್ನು ತೋರಿಸುವುದರಿಂದ, ಮಂಜೂರಾತಿ ಆದೇಶದಲ್ಲಿ, ಯಾವುದೇ ದುರ್ಬಲತೆಗಳಿಲ್ಲ.

4. ವಿಶೇಷ ನ್ಯಾಯಾಲಯದ ನಿರ್ಣಯಗಳನ್ನು ಟೀಕಿಸುವ ಮೂಲಕ ಅರ್ಜಿದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಆಪಾದಿತನು ಕರ್ನಾಟಕ ಸರ್ಕಾರದ 'ಎ' ಗುಂಪಿನ ಅಧಿಕಾರಿಯಾಗಿರುವರೆಂದು ವಾದಿಸಿದ್ದಾರೆ. ಶಿಸ್ತುಪ್ರಾಧಿಕಾರವು, ಸರ್ಕಾರವಾಗಿದೆ. ಅವನ ವಾದವೇನೆಂದರೆ, ಸಂಬಂಧಪಟ್ಟ ಸಚಿವರು, ಮಂಜೂರು ಮಾಡಲು ಸಕ್ಷಮವಾಗಿರಲಿಲ್ಲ ಎಂಬುದಾಗಿದೆ. ಅವರು ಕರ್ನಾಟಕ ರಾಜ್ಯ (ಕಾರ್ಯಕಲಾಪ) ನಿಯಮಗಳು, 1977ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ಕಾರ್ಯಕಲಾಪ' ಎಂದು ಉಲ್ಲೇಖಿಸಲಾಗಿದೆ) 20ನೇ ನಿಯಮವನ್ನು ಉಲ್ಲೇಖಿಸಿದ್ದು, ವಿಷಯವು, ಕಾರ್ಯಕಲಾಪ ನಿಯಮಗಳ ಮೊದಲನೇ ಅನುಸೂಚಿಯ ಬಾಬ್ತು ಸಂ.23ರ ಅಡಿಯಲ್ಲಿ ಬರುವ ಆಪಾದಿತನಿಗೆ ಸಂಬಂಧಪಟ್ಟಿರುವುದರಿಂದ, ಸರ್ಕಾರದ ಸಚಿವ ಸಂಪುಟದ ಮುಂದೆ ಇಡಬೇಕಾಗಿತ್ತೆಂದು ವಾದಿಸಿದ್ದಾರೆ. 23ನೇ ಸಂಖ್ಯೆಯ ಬಾಬ್ತು. ವಜಾಗೊಳಿಸುವಿಕೆಗೆ ಅಥವಾ ತೆಗೆದುಹಾಕುವಿಕೆಗೆ ಸಂಬಂಧಪಡುತ್ತದೆ; ಹಾಗೂ ಕಡ್ಡಾಯವಾಗಿ ಸರ್ಕಾರಿ ನೌಕರನನ್ನು ನಿವೃತ್ತಿಗೊಳಿಸುವುದಾಗಿದೆ. ಈ ಅಧಿಕಾರವನ್ನು ಚಲಾಯಿಸುವ ಸಕ್ಷಮ ಪ್ರಾಧಿಕಾರ ಸಚಿವ ಸಂಪುಟವಾಗಿದ್ದು, ಈ ಪ್ರಕರಣದಲ್ಲಿ, ವಿಷಯವನ್ನು ಸಚಿವ ಸಂಪುಟದ ಮುಂದೆ ತರದಿರುವುದರಿಂದ ಮಂಜೂರಾತಿ ಆದೇಶದಲ್ಲಿ, ಸಕ್ಷಮತೆಯ ಕೊರತೆ ಇದೆ. ಆದುದರಿಂದ ವಿಶೇಷ ನ್ಯಾಯಾಲಯವು ಆಪಾದಿತನನ್ನು ಬಿಡುಗಡೆಗೊಳಿಸಬೇಕು. ಅವರ ವಾದವನ್ನು ಬೆಂಬಲಿಸಲು ಅವರು ***ಆರ್. ಚಂದ್ರಶೇಖರ್ ರೆಡ್ಡಿ –ವಿರುದ್ಧ– ಕರ್ನಾಟಕ ರಾಜ್ಯ***[1] ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.

1. ಕ್ರಿಮಿನಲ್ ಅಪೀಲು ಸಂಖ್ಯೆ:2573/2013

5. ಲೋಕಾಯುಕ್ತರ ಪರವಾದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು, ಪ್ರಶ್ನಿತ ಆದೇಶವನ್ನು ಬೆಂಬಲಿಸುವಾಗ ಮಂಜೂರಾತಿ ಆದೇಶದಲ್ಲಿ ಕಾನೂನು ಬಾಹಿರತೆ ಇಲ್ಲವೆಂದು ನಿವೇದಿಸಿದ್ದಾರೆ. ಅವರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19(1)(ಬಿ) ಮತ್ತು (ಸಿ) ಪ್ರಕರಣವನ್ನು ಉಲ್ಲೇಖಿಸಿದ್ದು, 19(1)(ಬಿ) ಪ್ರಕರಣವು, ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಮಂಜೂರಾತಿ ಮಾಡುವ ಸಕ್ಷಮ ಪ್ರಾಧಿಕಾರಕ್ಕೆ ಸಂಬಂಧಪಡುತ್ತದೆ. ಖಂಡ (ಸಿ)ಯು ಸರ್ಕಾರಿ ನೌಕರರನ್ನು ಹೊರತುಪಡಿಸಿರುವುದಕ್ಕೆ ಸಂಬಂಧಪಡುತ್ತದೆ. ಆಪಾದಿತನು ಸಮೂಹ 'ಎ' ಗುಂಪಿಗೆ ಸೇರಿದ ರಾಜ್ಯ ಸರ್ಕಾರಿ ನೌಕರನಾಗಿರುವುದರಿಂದ, ಸಕ್ಷಮ ಪ್ರಾಧಿಕಾರವು ರಾಜ್ಯ ಸರ್ಕಾರವಾಗಿರುತ್ತದೆ. ಕಾರ್ಯಕಲಾಪ ನಿಯಮಗಳಲ್ಲಿ ಉಪಬಂಧಿಸಲಾದಂಥ ಪ್ರಕ್ರಿಯೆಯನ್ನನುಸರಿಸಿ, ಆಪಾದಿತನಿಗೆ ಕ್ರಮ ಜರುಗಿಸಲು ಮೊದಲ ನೋಟದ ಸಾಕ್ಷ್ಯಾಧಾರಗಳಿರುವುದನ್ನು ಮನದಟ್ಟು ಮಾಡಿದ ಮೇಲೆ ಮಂಜೂರು ಮಾಡುವುದನ್ನು ನಿರ್ಧರಿಸಲು ಕಡತವನ್ನು ಇಂಧನ ಸಚಿವರ ಮುಂದೆ ಇಡಲಾಗಿತ್ತು. ಮಂಜೂರಾತಿ ಆದೇಶಕ್ಕೆ ಇಂಧನ ಇಲಾಖೆಯ ಅಧೀನ ಕಾರ್ಯದರ್ಶಿಯವರು ಸಹಿಹಾಕಿದ್ದು, ಕಾರ್ಯಕಲಾಪ ನಿಯಮಗಳಿಗನುಸಾರ ಸದರಿ ಆದೇಶಕ್ಕೆ ಅವರು ಸಹಿ ಮಾಡಿರುವುದರಿಂದ ಇದರಲ್ಲಿ ಯಾವುದೇ ಅಸ್ಥಿರತೆ ಇರುವುದಿಲ್ಲ. ಈ ವಿವಾದಾಂಶದ ಸಂಬಂಧದಲ್ಲಿ ಅವರು, ***ಡಾ||ಎಚ್.ಸಿ. ಸತ್ಯಮ್ –ವಿರುದ್ಧ– ಕರ್ನಾಟಕ ರಾಜ್ಯ*** [2], ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯ ಅವಲಂಬಿಸಿದ್ದಾರೆ. ಅವರ ವಾದದ ಮುಂದಿನ ಅಂಶವು, ವಿಶೇಷ ನ್ಯಾಯಾಲಯದ ಆದೇಶವು, ಹೇಗೆ ನ್ಯಾಯವು ವಿಫಲವಾಗಿರುವ ಸಂದರ್ಭ ಒದಗಿ ಬಂದಿದೆ ಎಂಬುದನ್ನು ಆಪಾದಿತನು ತೋರಿಸಿದ ಹೊರತು ಪುನರ್ ಪರಿಶೀಲನೆಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ***ರಾಜ್ಯ ಪೋಲೀಸು ನಿರೀಕ್ಷಕರ ಮೂಲಕ –ವಿರುದ್ಧ– ಟಿ. ವೆಂಕಟೇಶ್ ಮೂರ್ತಿ*** [3], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ, ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು, ಆಪಾದಿತನು ನ್ಯಾಯದ ವಿಫಲತೆ ಬಗ್ಗೆ ವಾದ ಮಾಡಿಲ್ಲವೆಂದು ಹಾಗೂ ಈ ಎಲ್ಲಾ ಕಾರಣಗಳಿಗಾಗಿ ಅರ್ಜಿಯನ್ನು ವಜಾ ಮಾಡಬೇಕೆಂದು ನಿವೇದಿಸಿದ್ದಾರೆ.

2. ಕ್ರಿಮಿನಲ್ ಅರ್ಜಿ ಸಂಖ್ಯೆ: 899/2017 3. ಎಐಆರ್ 2004 ಎಸ್‌ಸಿ 5117

6. ಎರಡೂ ಕಡೆಯ ವಾದಗಳನ್ನು ಆಲಿಸಿದ ಮೇಲೆ, ಇಲ್ಲಿ ಗಮನಿಸಬೇಕಾದ ಮೊದಲ ಅಂಶವೆಂದರೆ, ಅರ್ಜಿದಾರ/ಆಪಾದಿತನು ಮಂಜೂರಾತಿ ಆದೇಶವು, ವಿವೇಚನೆಯನ್ನು ಬಳಸದಿರುವುದಕ್ಕೆ ಅವಕಾಶ ಮಾಡಿಕೊಟ್ಟಿದೆಯೆಂದು ಹೇಳಿರುವುದಿಲ್ಲ ಎಂಬುದಾಗಿದೆ. ಪ್ರಶ್ನೆ ಯಾವುದೆಂದರೆ ಅದು ಸಕ್ಷಮತೆಯದಾಗಿದೆ. ಆಪಾದಿತನ ಪ್ರಕಾರ, ಕರ್ನಾಟಕ ಸರ್ಕಾರದ ಸಚಿವ ಸಂಪುಟ ಮಾತ್ರ ಮಂಜೂರನ್ನು ಮಾಡಬಹುದು. ಈ ಪ್ರಕರಣದಲ್ಲಿ, ಸಂಪೂರ್ಣ ಕಡತವನ್ನು ಇಲಾಖಾ ಸಚಿವರ ಮುಂದೆ ಇಡಲಾಗಿದ್ದು, ಇವರು ಆದೇಶಾನುಸಾರ ಒಪ್ಪಿಕೊಂಡಿದ್ದು, ಇಲಾಖೆಯ ಅಧೀನ ಕಾರ್ಯದರ್ಶಿಯವರು, ಕಾರ್ಯಕಲಾಪ ನಿಯಮಗಳಿಗನುಸಾರವಾಗಿ ಮಂಜೂರಾತಿ ಆದೇಶಕ್ಕೆ ಸಹಿ ಮಾಡಿದ್ದಾರೆ. ಹೀಗಾಗಿ, ಮಾಡಲಾದ ಆದೇಶವು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19ನೇ ಪ್ರಕರಣದ ಅಗತ್ಯತೆಯನ್ನು ಭರಿಸುತ್ತಿಲ್ಲವೆ? ಎಂಬುದು ಪ್ರಶ್ನೆಯಾಗಿದೆ. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

> *''**19. ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಪೂರ್ವ ಮಂಜೂರಾತಿಯು ಅವಶ್ಯ.**–(1) ಲೋಕನೌಕರನು ಮಾಡಿರುವನೆಂದು ಹೇಳಲಾದ 7,10,11,13 ಮತ್ತು 15ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಯಾವುದೇ ನ್ಯಾಯಾಲಯವು ಸಂಜ್ಞೇಯತೆಯನ್ನು–*
>
> *(ಎ) ಒಕ್ಕೂಟದ ವ್ಯವಹಾರಗಳಿಗೆ ಸಂಬಂಧಿಸಿದಂತೆ ನಿಯೋಜಿತನಾಗಿರುವ ಮತ್ತು ಕೇಂದ್ರ ಸರ್ಕಾರದ ಮಂಜೂರಾತಿಯ ಮೂಲಕ ಅಥವಾ ಅದರ ಹೊರತು, ಅವನ ಪದದಿಂದ ತೆಗೆದುಹಾಕಲಾಗದ ವ್ಯಕ್ತಿಯ ಸಂದರ್ಭದಲ್ಲಿ ಆ ಸರ್ಕಾರದ;*
>
> *(ಬಿ) ಒಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ ನಿಯೋಜಿತನಾಗಿರುವ ಮತ್ತು ಆ ರಾಜ್ಯ ಸರ್ಕಾರದ ಮಂಜೂರಾತಿಯ*

*ಮೂಲಕ ಅಥವಾ ಅದರ ಹೊರತು, ಅವನ ಪದದಿಂದ ತೆಗೆದುಹಾಕಲಾಗದ ವ್ಯಕ್ತಿಯ ಸಂದರ್ಭದಲ್ಲಿ, ಆ ಸರ್ಕಾರದ;*

*(ಸಿ) ಯಾರೇ ಇತರ ವ್ಯಕ್ತಿಯ ಸಂದರ್ಭದಲ್ಲಿ, ಅವನ ಪದದಿಂದ ಅವನನ್ನು ತೆಗೆದುಹಾಕಲು ಸಕ್ಷಮವಾದ ಪ್ರಾಧಿಕಾರದ – ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ತೆಗೆದುಕೊಳ್ಳತಕ್ಕದಲ್ಲ.*

*(2) ಯಾವುದೇ ಕಾರಣಕ್ಕಾಗಿ (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಪೂರ್ವ ಮಂಜೂರಾತಿಯನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರವು ಕೊಡಬೇಕೋ ಹೇಗೆ ಎಂಬ ಬಗ್ಗೆ ಯಾವುದೇ ಸಂದೇಹವು ಉದ್ಭವಿಸುವಲ್ಲಿ, ಅಂಥ ಮಂಜೂರಾತಿಯನ್ನು, ಆ ಅಪರಾಧವನ್ನು ಮಾಡಲಾಗಿತ್ತೆಂದು ಹೇಳಲಾದ ಕಾಲದಲ್ಲಿ ಆ ಲೋಕ ನೌಕರನನ್ನು ಅವನ ಪದದಿಂದ ತೆಗೆದುಹಾಕಲು ಸಕ್ಷಮವಾಗಿದ್ದಂಥ ಆ ಸರ್ಕಾರ ಅಥವಾ ಪ್ರಾಧಿಕಾರವು ಕೊಡತಕ್ಕದು.*

*(3) ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಅಡಕವಾಗಿದ್ದಾಗ್ಯೂ–*

*(ಎ) ವಿಶೇಷ ನ್ಯಾಯಾಧೀಶನು ಮಾಡಿದ ಯಾವುದೇ ನಿರ್ಣಯ, ಶಿಕ್ಷೆಯ ಆದೇಶ ಅಥವಾ ಆದೇಶವನ್ನು ನ್ಯಾಯಾಲಯವು, (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದ ಮಂಜೂರಾತಿಯಿಲ್ಲವೆಂಬ ಅಥವಾ ಅದರಲ್ಲಿ ಯಾವುದೇ ತಪ್ಪು, ಲೋಪ ಅಥವಾ ಕ್ರಮ ದೋಷ ಇದೆಯೆಂಬ ಕಾರಣದ ಮೇಲೆ ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣೆಯಲ್ಲಿ, ಆ ನ್ಯಾಯಾಲಯದ ಅಭಿಪ್ರಾಯದಲ್ಲಿ ಅದರಿಂದಾಗಿ ವಾಸ್ತವವಾಗಿ ನ್ಯಾಯ ವಿಫಲತೆಯು ಉಂಟಾಗಿದ್ದ*

*ಹೊರತು ವಿಪರ್ಯಯಗೊಳಿಸತಕ್ಕುದಲ್ಲ ಅಥವಾ ಬದಲಾಯಿಸತಕ್ಕುದಲ್ಲ;*

*(ಬಿ) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳನ್ನು ಆ ಪ್ರಾಧಿಕಾರವು ಕೊಟ್ಟ ಮಂಜೂರಾತಿಯಲ್ಲಿ ಯಾವುದೇ ತಪ್ಪು, ಲೋಪ ಅಥವಾ ಕ್ರಮದೋಷ ಇದೆಯೆಂಬ ಕಾರಣದ ಮೇಲೆ, ಆ ನ್ಯಾಯಾಲಯದ ಅಭಿಪ್ರಾಯದಲ್ಲಿ ಅದರಿಂದಾಗಿ ವಾಸ್ತವವಾಗಿ ನ್ಯಾಯವಿಫಲತೆ ಉಂಟಾಗಿದ್ದ ಹೊರತು ತಡೆಹಿಡಿಯತಕ್ಕುದಲ್ಲ;*

*(ಸಿ) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳನ್ನು ಯಾವುದೇ ಇತರ ಕಾರಣದ ಮೇಲೆ ತಡೆಹಿಡಿಯತಕ್ಕುದಲ್ಲ ಮತ್ತು ಯಾವುದೇ ನ್ಯಾಯಾಲಯವು ಯಾವುದೇ ವಿಚಾರಣೆ, ಅಧಿವಿಚಾರಣೆ, ಅಪೀಲು ಅಥವಾ ಇತರ ವ್ಯವಹರಣೆಗಳಲ್ಲಿ ಮಾಡಿದ ಯಾವುದೇ ವಾದಕಾಲೀನ ಆದೇಶಕ್ಕೆ ಸಂಬಂಧಪಟ್ಟಂತೆ ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸತಕ್ಕುದಲ್ಲ.*

*(4) (3)ನೇ ಉಪಪ್ರಕರಣದ ಮೇರೆಗೆ ಅಂಥ ಮಂಜೂರಾತಿ ಇಲ್ಲದೆ ಇರುವುದರಿಂದ ಅಥವಾ ಅದರಲ್ಲಿನ ಯಾವುದೇ ತಪ್ಪು, ಲೋಪ ಅಥವಾ ಕ್ರಮದೋಷದಿಂದಾಗಿ ನ್ಯಾಯವಿಫಲತೆಯು ಉಂಟಾಗಿದೆಯೇ ಅಥವಾ ಪರಿಣಮಿಸಿದೆಯೇ ಹೇಗೆ ಎಂಬುದನ್ನು ನಿರ್ಧರಿಸುವಲ್ಲಿ ನ್ಯಾಯಾಲಯವು, ಆ ಆಕ್ಷೇಪಣೆಯನ್ನು ಆ ವ್ಯವಹರಣೆಗಳಲ್ಲಿನ ಯಾವುದೇ ಮುಂಚಿನ ಹಂತದಲ್ಲಿ ಎತ್ತಬಹುದಾಗಿದ್ದಿತೇ ಅಥವಾ ಎತ್ತಬೇಕಾಗಿತ್ತೇ ಹೇಗೆ ಎಂಬ*

*ಸಂಗತಿಯ ಬಗ್ಗೆ ಗಮನವನ್ನು ಕೊಡತಕ್ಕುದು. ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ-*

*(ಎ) ತಪ್ಪು ಎಂಬುದು ಮಂಜೂರಾತಿಯನ್ನು ಕೊಡುವ ಪ್ರಾಧಿಕಾರದ ಸಕ್ಷಮತೆಯನ್ನು ಒಳಗೊಳ್ಳುತ್ತದೆ;*

*(ಬಿ) ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಅಗತ್ಯಪಡಿಸಿದ ಮಂಜೂರಾತಿಯು, ಆ ಪ್ರಾಸಿಕ್ಯೂಷನ್ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಸೂಚನೆಯ ಮೇರೆಗೆ ಅಥವಾ ನಿರ್ದಿಷ್ಟಪಡಿಸಿದ ವ್ಯಕ್ತಿಯ ಮಂಜೂರಾತಿಯೊಂದಿಗೆ ಇರತಕ್ಕುದು ಎಂಬ ಯಾವುದೇ ಅಗತ್ಯತೆಗೆ ಅಥವಾ ಅಂಥದೇ ಸ್ವರೂಪದ ಯಾವುದೇ ಅಗತ್ಯತೆಗೆ ಮಾಡಿದ ಉಲ್ಲೇಖವನ್ನು ಒಳಗೊಳ್ಳುತ್ತದೆ.*

7. ಇದು ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಪಡುವುದರಿಂದ 19(1)(ಬಿ) ಪ್ರಕರಣವು ತುಂಬಾ ಪ್ರಮುಖವಾದುದಾಗಿದೆ. (ಸಿ)ಖಂಡವು, ಇತರ ಪ್ರವರ್ಗದ ಲೋಕ ನೌಕರರಿಗೆ ಸಂಬಂಧಪಡುತ್ತದೆ. ಈಗ 19(1) (ಬಿ) ಪ್ರಕರಣವನ್ನು ನೋಡುವುದಾದರೆ, ಇದು ನಿರ್ದಿಷ್ಟವಾಗಿ, ರಾಜ್ಯ ಸರ್ಕಾರವು ನಿಯೋಜಿಸಿರುವ ಲೋಕ ನೌಕರರ ಪ್ರಕರಣದಲ್ಲಿ, ಅದರ ವ್ಯವಹಾರಕ್ಕೆ ಸಂಬಂಧಪಡುವ ಸರ್ಕಾರವು ರೂಪಿಸಿದ ನಿಯಮಗಳಷ್ಟರಮಟ್ಟಿಗೆ, ಇದನ್ನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19ನೇ ಪ್ರಕರಣದ ನಿಜವಾದ ವ್ಯಾಪ್ತಿಯನ್ನು ತಗ್ಗಿಸಿರುವುದಕ್ಕೆ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19ನೇ ಪ್ರಕರಣದ ಸಾಲುಗಳಲ್ಲಿ ಓದಲಾಗುವುದಿಲ್ಲ. ಮಂಜೂರು ಮಾಡಲು ಪ್ರಾಧಿಕಾರದ ಸಕ್ಷಮತೆಯನ್ನು ಪರಿಶೀಲಿಸುವಾಗ, ನಿರ್ದಿಷ್ಟವಾಗಿ ಸರ್ಕಾರಿ ನೌಕರನ ಪ್ರಕರಣದಲ್ಲಿ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19(1) (ಬಿ) ಪ್ರಕರಣಕ್ಕೆ ಮಂಜೂರಾತಿಯು ಅನುರೂಪವಾಗಿದ್ದರೆ ಅದಷ್ಟು ಸಾಕಾಗುತ್ತದೆ. ಅಷ್ಟೇ ಅಲ್ಲದೆ, ಸರ್ಕಾರದ ವ್ಯವಹಾರ ನಿಯಮಗಳ ಹಿನ್ನೆಲೆಯಲ್ಲಿ ಪರಿಶೀಲನೆಯು ಅಗತ್ಯವಾಗಿರುವುದಿಲ್ಲ. ವ್ಯವಹಾರಗಳಿಗನುಸಾರವಾಗಿ ಸಂಬಂಧಪಟ್ಟ ಇಲಾಖಾ

ಸಚಿವರು ಮಂಜೂರಾತಿಯನ್ನು ಮಾಡಬೇಕೆ ಅಥವಾ ಸರ್ಕಾರದ ಸಚಿವ ಸಂಪುಟ ಮಂಜೂರಾತಿ ಮಾಡಬೇಕೆ ಎಂಬುದನ್ನು ನಿರ್ಧರಿಸುವುದು ಸರ್ಕಾರದೊಳಗಿನ ಆಂತರಿಕ ಏರ್ಪಾಡಾಗಿದ್ದು, ಪ್ರಾಸಿಕ್ಯೂಷನ್ ಏಜೆನ್ಸಿಯು ಇದರಲ್ಲಿ ಏನೂ ಮಾಡಲಾಗುವುದಿಲ್ಲ. ವ್ಯವಹಾರ ನಿಯಮಗಳಡಿಯಲ್ಲಿ ನಿಯಮಿಸಲಾದ ಪ್ರಕ್ರಿಯೆಯು ಸರ್ಕಾರೀ ಕಾರ್ಯ ವ್ಯವಸ್ಥೆಯೊಂದಿಗೆ ಅನುಸಾರವಾಗಿರದಿದ್ದರೆ, ಇದಕ್ಕೆ ಕ್ರಮದೋಷ ಕಾರಣವೇ ಹೊರತು ಪ್ರಾಸಿಕ್ಯೂಷನ್ ಏಜೆನ್ಸಿ ಹೊಣೆಯಾಗಿರುವುದಿಲ್ಲ. ಆದುದರಿಂದ, ಮಂಜೂರಾತಿ ಆದೇಶವು ವ್ಯವಹಾರ ನಿಯಮಗಳಿಗೆ ಅನುವರ್ತಿಯಾಗಿರದಿದ್ದರೆ, ಆಪಾದಿತನು ಅದರ ಅನುಕೂಲವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ***ಕೆ. ಚಂದ್ರಶೇಖರರೆಡ್ಡಿ (ಮೇಲಿನ)*** ಪ್ರಕರಣದಲ್ಲಿ, ಅಲ್ಲಿ ತಿಳಿಸಲಾದ ಸಂಗತಿಗಳಿಂದ ಬೇಧಿಸಬಹುದಾದಂತೆ, ಮಂಜೂರಾತಿ ನೀಡಿರುವರೆಂದು ಕಂಡು ಬರುವ ಡೆಸ್ಕ್ ಅಧಿಕಾರಿಯು ಅಧಿಕಾರ ಹೊಂದಿರುವುದಿಲ್ಲ. ಆದುದರಿಂದ, ಅಂಥ ಮಂಜೂರಾತಿ ಆದೇಶವು, ಊರ್ಜಿತವಾಗದ್ದು ಎಂದು ಅಭಿಪ್ರಾಯಪಡಲಾಗಿದ್ದು, ಈ ನಿರ್ಣಯವು ಅರ್ಜಿದಾರನಿಗೆ ಸಹಾಯಕಾರಿಯಾಗುವುದಿಲ್ಲ. ಲೋಕಾಯುಕ್ತ ಪರ ವಾದಿಸಿರುವ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಉದ್ಧರಿಸಲಾದ ***ಡಾ|| ಎಚ್.ಸಿ. ಸತ್ಯಮ್ (ಮೇಲಿನ)*** ಪ್ರಕರಣದಲ್ಲಿನ ಈ ನ್ಯಾಯಾಲಯದ ಮತ್ತೊಂದು ನಿರ್ಣಯವನ್ನು ಮಂಜೂರಾತಿಯನ್ನು ಪಡೆದುಕೊಳ್ಳುವ ಅಗತ್ಯದ ಬಗ್ಗೆ ಹೆಚ್ಚಾಗಿ ಚರ್ಚಿಸಲಾಗಿದ್ದು, ಇದನ್ನು ಇಲ್ಲಿಗೆ ಅನ್ವಯಿಸಲಾಗುವುದಿಲ್ಲ. ಆದರೆ ಮೇಲೆ ನಾನು ಚರ್ಚಿಸಲಾದಂತೆ, ಈ ಪ್ರಕರಣದಲ್ಲಿ ನೀಡಲಾದ ಮಂಜೂರಾತಿಯು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 19(1) (ಬಿ) ಪ್ರಕರಣದ ಅಗತ್ಯತೆಯನ್ನು ಮನಗಾಣಿಸಿರುವುದರಿಂದ ಇದು ದೋಷಯುಕ್ತವಾದುದಾಗಿದೆ.

8. ಅಷ್ಟೇ ಅಲ್ಲದೆ, ಅರ್ಜಿದಾರನು, ಪ್ರಶ್ನಿತ ಮಂಜೂರಾತಿ ಆದೇಶದ ಕಾರಣದಿಂದ ಹೇಗೆ ನ್ಯಾಯದ ವಿಫಲತೆಯಾಗಿದೆಯೆಂಬುದನ್ನು ಪ್ರದರ್ಶಿಸಿರುವುದಿಲ್ಲ. ಬಿಡುಗಡೆಗೊಳಿಸಲು ಕೋರಿರುವ ಅವನ ಅರ್ಜಿಯೂ ಕೂಡ ಹೇಗೆ ಮತ್ತು ಯಾವ ರೀತಿಯಲ್ಲಿ ನ್ಯಾಯದ ವಿಫಲತೆ ಆಗಿದೆ ಎಂಬುದನ್ನು ಸೂಚಿಸುವುದಿಲ್ಲ. ಲೋಕಾಯುಕ್ತದ ಪರವಾದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಪೋಲಿಸು

ನಿರೀಕ್ಷಕರ ಮೂಲಕ ರಾಜ್ಯ –ವಿರುದ್ಧ– ಟಿ. ವೆಂಕಟೇಶ್ ಮೂರ್ತಿ (ಮೇಲಿನ) ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿದ್ದು, ಇದರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

> *"11. "ನ್ಯಾಯದ ವಿಫಲತೆ" ಎಂಬ ಪದಾವಳಿಯು ತುಂಬಾ ನಮ್ಯತೆಯುಳ್ಳದ್ದು ಅಥವಾ ಸುಲಭವಾದ ಪದಾವಳಿಯಾಗಿದೆ, ಇದನ್ನು ಪ್ರಕರಣದ ಯಾವುದೇ ಸನ್ನಿವೇಶಕ್ಕು ಜೋಡಿಸಬಹುದಾಗಿದೆ. "ನ್ಯಾಯದ ವಿಫಲತೆ" ಎಂಬ ಪದಾವಳಿಯು ಕೆಲವು ವೇಳೆ, ವ್ಯುತ್ಪತ್ತಿ ಬದಲಾವಣೆಯಾಗುವುದರಿಂದ* ***(ಟೌನ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ –ವಿರುದ್ಧ – ಪರಿಸರ ವಿಜ್ಞಾನ ಇಲಾಖೆ (1977(1) ಎಐಐ ಇಆರ್.813: 1978 ಎಸಿ 359),*** *ಪ್ರಕರಣದಲ್ಲಿ ಲಾರ್ಡ್ ಡಿಪಲಾಕ್‌ನಿಂದ ಸದೃಶತೆ (simile)ಯನ್ನು ತೆಗೆದುಕೊಳ್ಳಲಾಗಿದೆ. ಕ್ರಿಮಿನಲ್ ನ್ಯಾಯಾಲಯವು ನಿರ್ದಿಷ್ಟವಾಗಿ, ವರಿಷ್ಠ ನ್ಯಾಯಾಲಯವನ್ನು, ವಾಸ್ತವವಾಗಿ ನ್ಯಾಯದ ವಿಫಲತೆಯಾಗಿತ್ತೇ ಅಥವಾ ಬರೀ ಮರೆಮಾಚಲಾಗಿತ್ತೇ ಎಂಬ ಹತ್ತಿರದ ಪರಿಶೀಲನೆಯನ್ನು ಮಾಡಬೇಕು".*

9. ನಮ್ಮ ಮುಂದಿರುವ ಪ್ರಕರಣದಲ್ಲಿ, ಸ್ಪಷ್ಟವಾಗಿ, ನ್ಯಾಯದ ವಿಫಲತೆಯ ಸೂಚಕವೇನೂ ಇಲ್ಲ. ಏನಾದರೂ ಇದ್ದರೂ ಕೂಡ ಅದನ್ನು ಅರ್ಜಿಯಲ್ಲಿ ತಿಳಿಸಿಲ್ಲ. ಅರ್ಜಿದಾರನು ಅಧಿವಿಚಾರಣೆಯ ಅವಧಿಯಲ್ಲಿ ಆ ವಿವಾದವನ್ನು ಎತ್ತಬಹುದಾಗಿತ್ತು. ಈಗ, ಪ್ರಶ್ನಿತ ಆದೇಶವನ್ನು ತಳ್ಳಿಹಾಕಲು ಯಾವುದೇ ಕಾರಣಗಳಿರುವುದಿಲ್ಲ. ಪುನರ್ ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಲಾಗಿದೆ.